# ವೇದಾಂತ ಮತ್ತು ರಾಮಕೃಷ್ಣ-ವಿವೇಕಾನಂದ ಭಾವಧಾರೆ

ಸ್ವಾಮಿ ನಿತ್ಯಸ್ಥಾನಂದ

(*ಹಿಂದಿನ ಸಂಚಿಕೆಯಿಂದ*)

**ವೇ**ದಾಂತವು ಸಾರುತ್ತದೆ: **ಏಕಮೇವಾದ್ವಿತೀಯಂ ಬ್ರಹ್ಮ**– "ಬ್ರಹ್ಮವೊಂದೇ ಇರುವುದು, ಅದರಿಂದ ಬೇರೆಯಾದುದು ಯಾವುದೂ ಇಲ್ಲ"; **ನೇಹ ನಾನಾಸ್ತಿ ಕಿಂಚನ** – "ಇಲ್ಲಿ ವೈವಿಧ್ಯವೆಂಬುದು ಇಲ್ಲವೇ ಇಲ್ಲ" ಇತ್ಯಾದಿ. ಹಾಗಾದರೆ ಈ ವೈವಿಧ್ಯಮಯವಾದ ಜಗತ್ತು ಎಲ್ಲಿಂದ ಬಂತು? ವೇದಾಂತಿಗಳದು ಬ್ರಹ್ಮಪರಿಣಾಮವಾದವಲ್ಲ, ಬ್ರಹ್ಮವಿವರ್ತವಾದ. ಮೊದಲನೆಯದರ ಪ್ರಕಾರ ಜಗತ್ತು ಬ್ರಹ್ಮದ ಪರಿಣಾಮ, ಅಂದರೆ ಬ್ರಹ್ಮವು ಜಗತ್ತಾಗಿ ಬದಲಾವಣೆ ಹೊಂದಿದೆ – ಹಾಲು ಬೆಣ್ಣೆಯಾಗಿ ಪರಿವರ್ತನೆಗೊಳ್ಳುವಂತೆ.

ಈ ವಾದವನ್ನು ಒಪ್ಪಿಕೊಂಡರೆ ಬ್ರಹ್ಮಕ್ಕೆ ವಿಕಾರವನ್ನು ಆರೋಪಿಸಿದಂತಾಗುತ್ತದೆ – ಅದರ ಅವಿಕಾರತ್ವ ಹೊರಟು ಹೋಗುತ್ತದೆ. ಸಮುದ್ರವು ಅಲೆಯಾಗಿ ಪರಿಣಮಿಸಿದಾಗ ನೀರಿನ ಸ್ವರೂಪವೇನೂ ಬದಲಾಗುವುದಿಲ್ಲ, ಮಣ್ಣು ಮಡಕೆಯಾದಾಗ ಮಣ್ಣು ಮಣ್ಣಾಗಿಯೇ ಉಳಿಯುತ್ತದೆ. ಹಾಗೆಯೇ ಬ್ರಹ್ಮವೂ ತನ್ನ ಸ್ವರೂಪವನ್ನು ಕಳೆದುಕೊಳ್ಳದೆ ಜಗತ್ತಾಗಿ ಪರಿಣಮಿಸಿರುವುದು ಎಂದು ವಾದಿಸಬಹುದು. ಯಾವುದೇ ರೀತಿಯ ಪರಿಣಾಮವನ್ನು ಒಪ್ಪಿಕೊಂಡರೂ ಬ್ರಹ್ಮದ ಅನಂತತ್ವವನ್ನು ನಿರಾಕರಿಸಿದಂತಾಗುತ್ತದೆ. ಆದ್ದರಿಂದ ಬ್ರಹ್ಮವು ಜಗತ್ತಾಗಿ ತೋರಿಕೊಳ್ಳುತ್ತಿರುವದು – ಜಗತ್ತು ಬ್ರಹ್ಮದ ವಿವರ್ತ – ಎಂದು ಹೇಳಬೇಕಾಗುತ್ತದೆ.

ಹಾವಿನಲ್ಲಿ ಹಗ್ಗವನ್ನು ನೋಡುವಂತೆ ನಾವು ಬ್ರಹ್ಮದಲ್ಲಿ ಜಗತ್ತನ್ನು ಕಾಣುತ್ತಿರುವೆವು – ಇದೊಂದು ಭ್ರಮೆ, ಮಾಯೆಯ ಪರಿಣಾಮ. ಹಾವನ್ನು ಹಗ್ಗವೆಂದು ಭ್ರಮಿಸುವುದು ಸ್ವಾಭಾವಿಕ, ಏಕೆಂದರೆ ಅವೆರಡರಲ್ಲಿ ಕೆಲವು ಸಮಾನತೆಗಳಿವೆ ಮತ್ತು ಎರಡೂ ಭೌತವಸ್ತುಗಳೇ ಆಗಿವೆ. ಆದರೆ ಬ್ರಹ್ಮಕ್ಕೂ ಜಗತ್ತಿಗೂ ಯಾವ ಸಂಬಂಧವೂ ಇಲ್ಲ – ಯಾವ ಸಮಾನತೆಯೂ ಇಲ್ಲ. ಶ್ರೀಶಂಕರಾಚಾರ್ಯರು ತಮ್ಮ ಅಧ್ಯಾಸಭಾಷ್ಯದಲ್ಲಿ ಹೇಳುವಂತೆ, ಅವೆರಡೂ ಬೆಳಕು ಮತ್ತು ಕತ್ತಲೆಗಳಂತೆ ವಿರುದ್ಧ ಸ್ವಭಾವವುಳ್ಳವು. ಅವುಗಳ ನಡುವೆ ಪರಸ್ಪರ ಅಧ್ಯಾರೋಪ ಸಾಧ್ಯವೇ ಇಲ್ಲ. ಕತ್ತಲೆಯಲ್ಲಿ ಬೆಳಕನ್ನು ಕಾಣುವುದಾಗಲಿ, ಬೆಳಕಿನಲ್ಲಿ ಕತ್ತಲೆಯನ್ನು ಕಾಣುವುದಾಗಲಿ ಅಸಾಧ್ಯ. ಹಾಗೆಯೇ ಬ್ರಹ್ಮದಲ್ಲಿ ಜಗತ್ತನ್ನು ಕಾಣುವುದೂ ಅಸಾಧ್ಯ. ಆದರೂ ಕೂಡ ಪರಸ್ಪರ ಅಧ್ಯಾರೋಪದಿಂದಾಗಿ ಲೋಕವ್ಯವಹಾರ ನಡೆಯುತ್ತಿದೆ. ಇದು ಹೇಗೆ ಎಂಬುದಕ್ಕೆ ವಿವರಣೆ ಇಲ್ಲ. ಇಂಥ ಅಸಾಧ್ಯವು ಸಾಧ್ಯವಾಗಿರುವುದನ್ನೇ **'ಮಾಯೆ'** ಎಂದು ಕರೆದಿರುವುದು. ಬ್ರಹ್ಮವೊಂದೇ ಇರುವುದರಿಂದ ಅದು ಅನಿರ್ವಚನೀಯ, ಮಾಯೆಯು ಇಲ್ಲದಿರುವುದರಿಂದ ಅದೂ ಅನಿರ್ವಚನೀಯ. ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಾರೆ: "ವೇದಾಂತದಲ್ಲಿ ಬರುವ ಪೂರ್ಣರೂಪವನ್ನು ಪಡೆದ ಮಾಯಾಭಾವನೆಯು ಭಾವಸತ್ತಾವಾದವೂ ಅಲ್ಲ, ವಸ್ತುಸತ್ತಾವಾದವೂ ಅಲ್ಲ, ಅದೊಂದು ಸಿದ್ಧಾಂತವೇ ಅಲ್ಲ. ಅದೊಂದು ವಾಸ್ತವಸ್ಥಿತಿಯ ನಿರೂಪಣೆ ಅಷ್ಟೆ ನಾವೇನಾಗಿರುವೆವೊ, ಸುತ್ತಲೂ ಏನನ್ನು ನೋಡುತ್ತಿರುವೆವೊ ಅದರ ನಿರೂಪಣೆ."

ಅಧ್ಯಾಸದ ಬಗ್ಗೆ ಹೇಳುತ್ತ ಶ್ರೀಶಂಕರಾಚಾರ್ಯರು, **ಅಧ್ಯಾಸೋ ನಾಮ ಅತಸ್ಮಿನ್ ತದ್ಬುದ್ಧಿರಿತಿ ಅವೋಚಾಮ** –"ಎಲ್ಲಿ ಯಾವುದಿಲ್ಲವೊ ಅದನ್ನು ನೋಡುವುದೇ ಅಧ್ಯಾಸ" (ಬ್ರಹ್ಮಸೂತ್ರ ಭಾಷ್ಯ, ಪೀಠಿಕೆ) ಎಂದು ಹೇಳುತ್ತಾರೆ. ಬ್ರಹ್ಮದಲ್ಲಿ ಜಗತ್ತನ್ನು ಕಾಣುವುದು ಅಸಾಧ್ಯವಾದರೂ ಕಾಣುತ್ತಿದ್ದೇವೆ. ಈ ಜಗತ್ತನ್ನು ನೋಡುತ್ತಿರುವುದಂತೂ ನಿಜ. ಅದು ಶಶವಿಷಾಣದಂತೆ (ಮೊಲದ ಕೊಂಬಿನಂತೆ) ಅಸತ್ಯವಲ್ಲ. ಅಲ್ಲಿ ಏನೋ ಇದೆ, ಅದನ್ನು ಬೇರೆ ಬೇರೆ ರೀತಿಯಲ್ಲಿ ನೋಡುತ್ತಿದ್ದೇವೆ. ನಾವು ಇಂದ್ರಿಯಗಳ ಮೂಲಕ ಗ್ರಹಿಸುತ್ತಿರುವುದೆಲ್ಲವೂ ಮನಸ್ಸಿನ ಸೃಷ್ಟಿ. ಆದ್ದರಿಂದ ಈ ಜಗತ್ತು ಸತ್ಯವೂ ಅಲ್ಲ, ಅಸತ್ಯವೂ ಅಲ್ಲ.

> **"ನನ್ನ, ನಿಮ್ಮ ಮತ್ತು ಪ್ರತಿಯೊಬ್ಬರ ಮನಸ್ಸಿನ ದೃಷ್ಟಿಯಿಂದ ಈ ಜಗತ್ತು ಇದೆ. ನಾವು ಪಂಚೇಂದ್ರಿಯಗಳ ಮೂಲಕ ಜಗತ್ತನ್ನು ನೋಡು ತ್ತಿರುವೆವು. ನಮಗೆ ಇನ್ನೊಂದು ಇಂದ್ರಿಯವಿದ್ದಿದ್ದರೆ ಜಗತ್ತಿನಲ್ಲಿ ನಾವು ಇನ್ನೂ ಹೆಚ್ಚು ಹೆಚ್ಚಾದುದನ್ನು ನೋಡಬಹುದಾಗಿತ್ತು. ನಮಗೆ ಮತ್ತೊಂದು ಇಂದ್ರಿಯ ಇದ್ದಿದ್ದರೆ ಜಗತ್ತು ಮತ್ತೂ ಬೇರೆಯಾಗಿ ಕಾಣುತ್ತಿತ್ತು. ಆದಕಾರಣ ಜಗತ್ತಿಗೆ ನಿಜವಾದ ಅಸ್ತಿತ್ವವಿಲ್ಲ. ಜಗತ್ತು ಅವಿಕಾರಿಯಲ್ಲ, ಅಚಲವಲ್ಲ, ಅನಂತವಲ್ಲ. ಅದನ್ನು ಇಲ್ಲವೆಂತಲೂ ಹೇಳಲಾಗುವುದಿಲ್ಲ, ಅದು ಇದೆ; ಅದರ ಮೂಲಕ ನಾವು ಕೆಲಸ ಮಾಡಬೇಕಾಗಿದೆ. ಅದು ಅಸ್ತಿ–ನಾಸ್ತಿಗಳ ಒಂದು ಮಿಶ್ರಣ."**
>
> **– ಸ್ವಾಮಿ ವಿವೇಕಾನಂದ**

ಶ್ರೀರಾಮಕೃಷ್ಣರ ಉಪದೇಶಗಳಲ್ಲಿ 'ಜ್ಞಾನ' ಮತ್ತು 'ವಿಜ್ಞಾನ' ಎಂಬ ಎರಡು ಭಾವನೆಗಳು ಬರುತ್ತವೆ. ಜ್ಞಾನವೆಂದರೆ 'ನೇತಿ, ನೇತಿ' ಮಾರ್ಗದ ಮೂಲಕ ಎಲ್ಲವನ್ನೂ ನಿರಾಕರಿಸುತ್ತ ಬ್ರಹ್ಮಜ್ಞಾನ ವನ್ನು ಪಡೆಯುವುದು. ಇದನ್ನು ಪಡೆದಾದ ಮೇಲೆ ಎಲ್ಲವನ್ನೂ ಬ್ರಹ್ಮಮಯವಾಗಿ ಕಾಣುವುದು ವಿಜ್ಞಾನ. ಇದನ್ನು ಕೆಳಗಿನ ಉದಾಹರಣೆಯ ಮೂಲಕ ಅವರು ವಿವರಿಸುತ್ತಾರೆ: ಒಬ್ಬನು ಒಂದೊಂದೇ ಮೆಟ್ಟಲನ್ನು ಹಿಂದೆ ಬಿಟ್ಟು ಮಹಡಿಯನ್ನು ಏರುತ್ತಾನೆ. ಅನಂತರ ಅವನಿಗೆ ತಿಳಿದುಬರುತ್ತದೆ, ಯಾವ ವಸ್ತುಗಳಿಂದ ಮಹಡಿಯು ತಯಾರಾಗಿದೆಯೋ ಅದೇ ವಸ್ತುಗಳಿಂದಲೇ ಮೆಟ್ಟಲುಗಳು ನಿರ್ಮಾಣವಾಗಿವೆ ಎಂದು. **ದೃಷ್ಟಿಂ ಜ್ಞಾನಮಯೀಂ ಕೃತ್ವಾ ಪಶ್ಯೇತ್ ಬ್ರಹ್ಮಮಯಂ ಜಗತ್** – "ಜ್ಞಾನಮಯ ದೃಷ್ಟಿಯನ್ನು ಪಡೆದು ಬ್ರಹ್ಮಮಯ ಜಗತ್ತನ್ನು ನೋಡು" – ಈ ಹೇಳಿಕೆ ಶ್ರೀರಾಮಕೃಷ್ಣರ ಮಾತಿಗೆ ಸಾದೃಶ್ಯವಾಗಿದೆ. ಅವರ ದೃಷ್ಟಿಯಲ್ಲಿ ಎಲ್ಲವೂ ಚೈತನ್ಯದ ರೂಪಗಳೇ, ಅದಕ್ಕಿಂತ ಬೇರೆಯಾದುದು ಯಾವುದೂ ಇರಲಾರದು. 'ಯೋಗವಾಸಿಷ್ಠ'ದ ದೃಷ್ಟಿಯಲ್ಲಿ ಚೈತನ್ಯಕ್ಕಿಂತ ಬೇರೆಯಾದುದನ್ನು ಚೈತನ್ಯವು ಗ್ರಹಿಸಲಾರದು.

**ಬೋಧಾವಬುದ್ಧಂ ಯದ್ವಸ್ತು ಬೋಧ ಏವ ತದುಚ್ಯತೇ ।**
**ನಾಬೋಧಂ ಬುಧ್ಯತೇ ಬೋಧೋ ವೈರೂಪ್ಯಾತ್ತೇನ ನಾನ್ಯಥಾ ॥**

(*ಯೋಗವಾಸಿಷ್ಠ, ೨.೨೫.೧೨*)

"ಚೈತನ್ಯದ ಮೂಲಕ ಅರಿಯಲ್ಪಟ್ಟ ಯಾವ ವಸ್ತುವಿದೆಯೊ ಅದು ಚೈತನ್ಯವೇ ಆಗಿರಬೇಕು. ಏಕೆಂದರೆ ಚೈತನ್ಯವಲ್ಲದುದನ್ನು ಚೈತನ್ಯವು ತಿಳಿಯಲಾರದು – ಸ್ವರೂಪಭೇದದಿಂದಾಗಿ. ಆದ್ದರಿಂದ ಚೈತನ್ಯಕ್ಕಿಂತ ಬೇರೆಯಾದುದು ಯಾವುದೂ ಇಲ್ಲ."

ವೇದಾಂತದ ಇನ್ನೊಂದು ಮುಖ್ಯ ಭಾವನೆ, **ಜೀವೋ ಬ್ರಹ್ಮೈವ ನಾಪರಃ** – "ಜೀವವು ಬ್ರಹ್ಮವೇ, ಬೇರೆ ಅಲ್ಲ" ಎಂಬುದು. **ಅಹಂ ಬ್ರಹ್ಮಾಸ್ಮಿ, ತತ್ತ್ವಮಸಿ, ಅಯಮಾತ್ಮಾ ಬ್ರಹ್ಮ** ಮುಂತಾದ ಉಪನಿಷತ್ ಮಹಾವಾಕ್ಯಗಳನ್ನು ಇದಕ್ಕೆ ಉದಾಹರಿಸಲಾಗಿದೆ. ವಿಶೇಷವಾಗಿ **ತತ್ತ್ವಮಸಿ** – "ನೀನು ಅದೇ ಆಗಿರುವೆ" ಎಂಬ ವಾಕ್ಯವನ್ನು ಕುರಿತು ಬಹಳಷ್ಟು ಚರ್ಚೆ ನಡೆಯುತ್ತದೆ. ಇಲ್ಲಿ 'ನೀನು' ಎಂದರೆ ದೇಹೇಂದ್ರಿಯಮನಸ್ಸುಗಳ ಸಂಬಂಧವುಳ್ಳ ಜೀವಾತ್ಮ ಹಾಗೂ 'ಅದು' ಎಂದರೆ ಸರ್ವಾಂತರ್ಯಾಮಿಯೂ ಸರ್ವನಿಯಾಮಕನೂ ಆದ, ಇಡೀ ವಿಶ್ವದೊಡನೆ ಸಂಬಂಧವುಳ್ಳ ಪರಮಾತ್ಮ. ಒಂದು ವ್ಯಷ್ಟಿ ಚೈತನ್ಯ, ಮತ್ತೊಂದು ಸಮಷ್ಟಿ ಚೈತನ್ಯ ಎಂದು ಹೇಳಬಹುದು. ಇವೆರಡೂ ಒಂದೇ, ಅಂದರೆ **ವಿಷಯ** ಮತ್ತು **ವಿಷಯಿ** ಒಂದೇ ಎಂಬುದು ಇದರ ಅರ್ಥ. ಸ್ಥೂಲದೃಷ್ಟಿಯಿಂದ ನೋಡಿದರೆ ಇದು ಅಸಾಧ್ಯ. ಒಂದು ವ್ಯಕ್ತಿಭಾವವುಳ್ಳ ಅಲ್ಪಾತ್ಮ, ಮತ್ತೊಂದು ವಿಶ್ವವ್ಯಾಪಿಯಾದ ವಿಶ್ವಾತ್ಮ – ಇವೆರಡರ ಐಕ್ಯ ಹೇಗೆ ಸಾಧ್ಯ? ಸೀಮಿತ ಅಸ್ತಿತ್ವವುಳ್ಳ ಜೀವಾತ್ಮನೂ ಜಗದೊಡೆಯನಾದ ಈಶ್ವರನೂ ಒಂದೇ ಎಂದು ಹೇಳುವುದು ಧರ್ಮನಿಂದೆಯಲ್ಲವೇ ಎಂದು ಅನೇಕರು ಆಕ್ಷೇಪಿಸಬಹುದು. ಇದಕ್ಕೆ ಉತ್ತರ ಇಲ್ಲಿದೆ.

ಜೀವಾತ್ಮನ ದೇಹ, ಮನಸ್ಸು ಮುಂತಾದ ಉಪಾಧಿಗಳನ್ನೂ ಹಾಗೆಯೇ ವಿಶ್ವಸೃಷ್ಟಿ, ಒಡೆತನ ಮುಂತಾದ ಈಶ್ವರಸಂಬಂಧವಾದ ಉಪಾಧಿಗಳನ್ನೂ ತೆಗೆದುಬಿಟ್ಟರೆ ಕೊನೆಗುಳಿಯುವುದು ಇಬ್ಬರಿಗೂ ಸಮಾನವಾದ ಚೈತನ್ಯತತ್ತ್ವವೊಂದೇ. ಒಬ್ಬ ನಟನು ಇದ್ದಾನೆ ಎಂದು ಇಟ್ಟುಕೊಳ್ಳಿ. ಅವನು ಬೇರೆಬೇರೆ ನಾಟಕಗಳಲ್ಲಿ ರಾಮ, ಕೃಷ್ಣ ಮುಂತಾದ ಬೇರೆ ಬೇರೆ ಪಾತ್ರಗಳನ್ನು ವಹಿಸುತ್ತಾನೆ. ಅವನು ವಹಿಸುವ ಪಾತ್ರಗಳಿಗೆ ಸಂಬಂಧಿಸಿದ ವೇಷಭೂಷಣಗಳನ್ನು ತೆಗೆದುಬಿಟ್ಟರೆ ಉಳಿಯುವವನು ಒಬ್ಬನೇ ನಟ. ನಟನ ಪರಿಚಯವಿಲ್ಲದವರಿಗೆ ರಾಮನೇ ಬೇರೆ, ಕೃಷ್ಣನೇ ಬೇರೆ ಎಂದು ಕಾಣುತ್ತದೆ. ಆದರೆ ನಟನ ಪರಿಚಯವಿರುವವನು, "ಅವನೇ ಇವನು" ಎಂದು ಭಾವಿಸುತ್ತಾನೆ.

ಸ್ವಾಮಿ ವಿವೇಕಾನಂದರು ಒಂದು ಸುಂದರ ಉದಾಹರಣೆಯ ಮೂಲಕ ಇದನ್ನು ವಿವರಿಸುತ್ತಾರೆ. ಮಣ್ಣಿನಿಂದ ಒಂದು ಆನೆಯನ್ನು ಮತ್ತು ಒಂದು ಇಲಿಯನ್ನು ತಯಾರಿಸಿದರೆ ಆನೆ ಮತ್ತು ಇಲಿ ಒಂದೇ ಎಂದು ಹೇಳಲಾಗುವುದಿಲ್ಲ. ಆದರೆ ಮಣ್ಣಿನ ದೃಷ್ಟಿಯಿಂದ ಅವೆರಡೂ ಒಂದೇ. ನಾಮರೂಪಗಳ ಬಹುತ್ವ ಸಾಧ್ಯವೇ ಹೊರತು ಚೈತನ್ಯದ ಬಹುತ್ವ ಸಾಧ್ಯವಿಲ್ಲ. ನಾನಾ ಚೈತನ್ಯಗಳಿರುವುದಾದರೆ ಅವುಗಳ ಬಹುತ್ವವನ್ನು ಅನುಭವಿಸುವ ಇನ್ನೊಂದು ಚೈತನ್ಯವನ್ನು ಊಹಿಸಬೇಕಾಗುತ್ತದೆ. ಆದ್ದರಿಂದ ಚೈತನ್ಯದ ಬಹುತ್ವ ಕೇವಲ ಉಪಾಧಿನಿಮಿತ್ತವಾದುದು ಎಂದು ಹೇಳಬೇಕಾಗುತ್ತದೆ – ಸೂರ್ಯ ವಿವಿಧ ಪಾತ್ರೆಗಳಲ್ಲಿರುವ ನೀರಿನಲ್ಲಿ ಅನೇಕವಾಗಿ ಕಾಣುವಂತೆ.

ಮಾಯೆಯ ಆವರಣದಿಂದಾಗಿ ಭಕ್ತ ಮತ್ತು ಭಗವಂತನಲ್ಲಿ ಭೇದ ಏರ್ಪಟ್ಟಿದೆ. ಶ್ರೀರಾಮಕೃಷ್ಣರದು ಭಕ್ತಿಭಾವ. ಅವರ ಪ್ರಕಾರ ನಿಜವಾಗಿಯೂ **ಭಕ್ತ, ಭಾಗವತ** ಮತ್ತು **ಭಗವಂತ** ಒಂದೇ. ಈ ಮಾಯೆಯ ಆವರಣವನ್ನು ಭಗವಂತನೇ ಕೃಪೆಮಾಡಿ ಸರಿಸಬೇಕು, ಅದಕ್ಕಾಗಿ ಅವನನ್ನು ನಾವು ಪ್ರಾರ್ಥಿಸಬೇಕು. ಭಕ್ತಿಯ ಮೂಲಕ ಈ ಅದ್ವೈತ ಸ್ಥಿತಿಯನ್ನು ಮುಟ್ಟಬೇಕು. ಮೊದಲೇ 'ಅಹಂ ಬ್ರಹ್ಮಾಸ್ಮಿ' ಅಥವಾ 'ನಾನೇ ದೇವರು' ಎಂದು ಹೇಳುವುದು ಸರಿಯಲ್ಲ; ಅದೊಂದು ಅಪ್ರಾಮಾಣಿಕವಾದ ಭಾವನೆಯಾಗುತ್ತದೆ. ನಮ್ಮಲ್ಲಿ ದೇಹಬುದ್ಧಿ ಇರುವವರೆಗೂ, 'ನಾನು' ಎಂಬ ವ್ಯಕ್ತಿಭಾವ ಇರುವವರೆಗೂ, 'ನಾನೇ ದೇವರು' ಎಂದು ಹೇಳುವುದು ಅರ್ಥಹೀನ, ಅದೊಂದು ಮಿಥ್ಯಾಲಾಪವಾಗುತ್ತದೆ. ಶ್ರೀರಾಮಕೃಷ್ಣರು ಇದನ್ನು ಒಂದು ಉದಾಹರಣೆಯ ಮೂಲಕ ವಿವರಿಸುತ್ತಿದ್ದರು. ಒಬ್ಬ ಸೇವಕನು ರಾಜನ ಹತ್ತಿರ ಹೋಗಿ, 'ನಾನು ನೀನು ಒಂದೇ' ಎಂದು ರಾಜನ ಪಕ್ಕದಲ್ಲಿ ಕುಳಿತುಕೊಂಡರೆ ರಾಜ ಅವನನ್ನು ಹೊಡೆದು ಓಡಿಸುತ್ತಾನೆ. ಆದರೆ ರಾಜನೇ ಸೇವಕನ ನಿಷ್ಠೆಗೆ ಮೆಚ್ಚಿ ಅವನನ್ನು ಕರೆದು ಪಕ್ಕದಲ್ಲಿ ಕೂರಿಸಿಕೊಂಡರೆ ಪರವಾಗಿಲ್ಲ. ಹಾಗೆಯೆ ಭಕ್ತಿಯ ಮೂಲಕ ಭಗವಂತನನ್ನು ಮೆಚ್ಚಿಸಿ, ಅವನ ಅನುಗ್ರಹದಿಂದ ಅವನೊಡನೆ ಒಂದಾಗಬೇಕು.

ಈ ಅದ್ವೈತಾನುಭವದ ನಂತರವೂ ಶುದ್ಧ ದ್ವೈತಭಾವವನ್ನು ಉಳಿಸಿಕೊಂಡು ಭಗವದಾನಂದವನ್ನು ಅನುಭವಿಸಲು ಶ್ರೀರಾಮಕೃಷ್ಣರು ಬಯಸುತ್ತಾರೆ. ಅವರೇ ಹೇಳುವಂತೆ, "ನಾನು ಸಕ್ಕರೆಯಾಗುವುದಕ್ಕೆ ಇಷ್ಟಪಡುವುದಿಲ್ಲ, ಸಕ್ಕರೆಯನ್ನು ಸವಿಯಲು ಇಷ್ಟಪಡುತ್ತೇನೆ." ಇಲ್ಲಿ ಮಧುಸೂದನ ಸರಸ್ವತಿಯವರ ಕೆಳಗಿನ ಹೇಳಿಕೆಯನ್ನು ಸ್ಮರಿಸಿಕೊಳ್ಳಬಹುದು. ಅವರು ಕಟ್ಟಾ ಅದ್ವೈತವಾದಿಗಳಾದರೂ ಶ್ರೀಕೃಷ್ಣನ ಭಕ್ತರು.

**ದ್ವೈತಂ ಮೋಹಾಯ ಬೋಧಾತ್**
**ಪ್ರಾಕ್ ಪ್ರಾಪ್ತೇ ಬೋಧೇ ಮನೀಷಯಾ ।**
**ಭಕ್ತ್ಯರ್ಥಂ ಕಲ್ಪಿತಂ ದ್ವೈತಮದ್ವೈತಾದಪಿ ಸುಂದರಮ್ ॥**

"ಜ್ಞಾನೋದಯಕ್ಕೆ ಮುಂಚೆ ದ್ವೈತವು ಮೋಹಕ್ಕೆ ಕಾರಣವಾಗುತ್ತದೆ. ಆದರೆ ಸಾಧನೆಯ ಮೂಲಕ ಜ್ಞಾನವನ್ನು ಪಡೆದಮೇಲೆ, ಭಕ್ತಿಗೋಸ್ಕರ ಕಲ್ಪಿಸಿಕೊಂಡ ದ್ವೈತವು ಅದ್ವೈತಕ್ಕಿಂತಲೂ ಸುಂದರ."

ಎಲ್ಲವೂ ಅನುಭವದಲ್ಲಿ ಪರ್ಯವಸಾನಗೊಳ್ಳಬೇಕು. ನಿಜವಾಗಿಯೂ ಅನುಭವಿಸುವುದೆಂದರೆ ಅನುಭಾವ್ಯದೊಡನೆ ತಾದಾತ್ಮ್ಯವನ್ನು ಹೊಂದುವುದು. ಆಹಾರವನ್ನು ಅನುಭವಿಸುವುದೆಂದರೆ ಆಹಾರವು ನಮ್ಮ ಶರೀರದೊಡನೆ ಒಂದಾಗುವುದು. ಒಂದು ಸಂಗೀತವನ್ನಾಗಲಿ ಕಲಾಕೃತಿಯನ್ನಾಗಲಿ ಅನುಭವಿಸುವುದೆಂದರೆ ಅದರೊಡನೆ ತನ್ಮಯರಾಗುವುದು. ಹಾಗೆಯೇ ಆಧ್ಯಾತ್ಮಿಕ ಅನುಭವವೂ ತನ್ಮಯತೆಯಲ್ಲಿ ಪರ್ಯವಸಾನಗೊಳ್ಳಬೇಕು. ಈ ತನ್ಮಯತೆಯೇ ಆತ್ಯಂತಿಕ ಸತ್ಯದೊಡನೆ, ಶುದ್ಧ ಚೈತನ್ಯದೊಡನೆ ಒಂದಾಗುವುದು. ಆದ್ದರಿಂದ ಅದ್ವೈತಾನುಭವವೇ ವೇದಾಂತದ ಚರಮ ಗುರಿ. ★